ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.**

ಸಂಖ್ಯೆ:ಸಿ7(3)ಪ್ರಾಶಿಅ.ಖಾ.ಶಾ.ಮಾ.ನ.06:2022-23 ದಿನಾಂಕ:17ನೇ ಜನವರಿ 2023

**: ಸುತ್ತೋಲೆ :**

ವಿಷಯ: ಖಾಸಗಿ ಅನುದಾನಿತ / ಅನುದಾನರಹಿತ ಶಾಲೆಗಳ ಪ್ರಥಮ ಮಾನ್ಯತೆ ಹಾಗೂ ಮಾನ್ಯತೆ ನವೀಕರಣದ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂ:ಸಿ7[3]ಪ್ರಾಶಿಅ:ಖಾಶಾಮಾನ:06:2021-22 ದಿನಾಂಕ:23.05.2022, ದಿ:29.07.2022, ದಿ:01.08.2022, ದಿ:27.09.2022, ದಿ:10.11.2022 ಮತ್ತು ದಿ:19.12.2022.

* * * *

ಮೇಲಿನ ವಿಷಯ ಹಾಗೂ ಉಲ್ಲೇಖದ ಸುತ್ತೋಲೆಗಳಲ್ಲಿ ಖಾಸಗಿ ಶಾಲೆಗಳ ಮಾನ್ಯತೆ/ಮಾನ್ಯತೆ ನವೀಕರಣಕ್ಕೆ ಅರ್ಜಿ ಸಲ್ಲಿಸಲು ಅವಕಾಶವನ್ನು ಕಲ್ಪಿಸಿ ದಿನಾಂಕಗಳನ್ನು ವಿಸ್ತರಿಸಲಾಗಿದ್ದು ಈ ಅವಧಿಯು ದಿನಾಂಕ:26.11.2022ಕ್ಕೆ ಮುಕ್ತಾಯಗೊಂಡಿರುತ್ತದೆ. ಆದರೂ ಕೆಲವೊಂದು ಶಾಲೆಗಳು ಕಾರಣಾಂತರಗಳಿಂದ ಅರ್ಜಿ ಸಲ್ಲಿಸಲು ಆಗಿಲ್ಲವೆಂದು ಹಾಗೂ ನವೆಂಬರ್ ಅಂತ್ಯದಲ್ಲಿ ಹೊಸ ಶಾಲೆಗಳನ್ನು ನೋಂದಣಿ ಮಾಡಿ ಆದೇಶಿಸಿದ್ದು ಆ ಶಾಲೆಗಳು ಮಾನ್ಯತೆಗಾಗಿ ಅರ್ಜಿ ಸಲ್ಲಿಸಬೇಕಾಗಿದ್ದು ಈಗಾಗಲೇ ಅಂದರೆ 2022-23ನೇ ಸಾಲಿನ ಏಪ್ರಿಲ್-ಮೇ ಮಾಹೆಯಿಂದ ಜುಲೈ-31ರ ವರೆಗಿನ ಅವಧಿಯಲ್ಲಿ ಮಾನ್ಯತೆ ಅವಧಿ ಮುಕ್ತಾಯವಾಗುವ ಶಾಲೆಗಳು ಹಾಗೂ 2022-23ನೇ ಸಾಲಿನಲ್ಲಿ ಹೊಸದಾಗಿ ನೋಂದಣಿ ಪಡೆದು ಪ್ರಥಮ ಮಾನ್ಯತೆ (ಮಾನ್ಯತೆ) ಪಡೆಯಬೇಕಾದ ಶಾಲೆಗಳು ಈ ಶೈಕ್ಷಣಿಕ ಅವಧಿಯಲ್ಲಿ ಮಾನ್ಯತೆ ಪಡೆಯದಿದ್ದಲ್ಲಿ ಅಂತಹ ಶಾಲೆಗಳು ಅನಧಿಕೃತ ಶಾಲೆಗಳೆಂದು ಪರಿಗಣಿಸಬೇಕಾಗುತ್ತದೆ.

**ಈಗಾಗಲೇ ಎಲ್ಲಾ ಜಿಲ್ಲೆಗಳಲ್ಲಿ ಮಾನ್ಯತೆ / ಮಾನ್ಯತೆ ನವೀಕರಣಕ್ಕೆ ಸಲ್ಲಿಸಿದ ಅರ್ಜಿಗಳನ್ನು ಬಹುತೇಕ ಇತ್ಯರ್ಥಪಡಿಸಲಾಗಿದ್ದು, ಕೆಲವು ಶಾಲಾ ಆಡಳಿತ ಮಂಡಳಿಗಳು ಅರ್ಜಿಗಳನ್ನು ನಿಗದಿತ ಅವಧಿಯಲ್ಲಿ ಸಲ್ಲಿಸಲು ಮತ್ತೆ ವಿಫಲವಾಗಿರುವುದರಿಂದ ಇಂತಹ ಶಾಲೆಗಳು ಎಸ್.ಎಸ್.ಎಲ್.ಸಿ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಹಾಜರುಪಡಿಸಲು ಸಾಧ್ಯವಾಗುವುದಿಲ್ಲವಾದ್ದರಿಂದ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಶಾಲಾ ಆಡಳಿತ ಮಂಡಳಿಗಳು ಪುನಃ ಅರ್ಜಿ ಸಲ್ಲಿಸಲು ಅನುಕೂಲವಾಗುವಂತೆ ದಿನಾಂಕ:18.01.2023ರಿಂದ ದಿನಾಂಕ:25.01.2023ರವರೆಗೆ ಅವಕಾಶ ಕಲ್ಪಿಸಲಾಗಿದೆ.**

ದಿನಾಂಕವನ್ನು ವಿಸ್ತರಣೆ ಮಾಡಿರುವ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಶಾಲೆಗಳಿಗೆ ತಿಳುವಳಿಕೆ ನೀಡಲು ಸೂಚಿಸಿದೆ. ಈಗಾಗಲೇ ಉಲ್ಲೇಖಿದ ಸುತ್ತೋಲೆ ದಿನಾಂಕ:10.11.2022ರಲ್ಲಿ ಯಾವ ಯಾವ ಶಾಲೆಗಳು ಮಾನ್ಯತೆ ಪಡೆಯಲು ಅವಶ್ಯಕತೆ ಇದೆಯೋ ಅಂತಹ ಶಾಲೆಗೆ ನೋಟಿಸ್ ನೀಡಲು ತಿಳಿಸಲಾಗಿತ್ತು. ಈ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ನೋಟಿಸ್ ನೀಡಿರುವ ಬಗ್ಗೆ ಉಪನಿರ್ದೇಶಕರಿಗೆ ವರದಿ ಸಲ್ಲಿಸಲು ತಿಳಿಸಲಾಗಿತ್ತು. ಕರ್ತವ್ಯ ನಿರ್ಲಕ್ಷತೆಯಾಗಿರುತ್ತದೆ. ಹಾಗೂ ಎಸ್.ಎಸ್.ಎಲ್.ಸಿ ಮಕ್ಕಳ ಈ ಬಾರಿ ಎಚ್ಚರಿಕೆ ಸಂದೇಶವನ್ನು ನೀಡಿ ಆ ಶಾಲೆಗಳು ಎಲ್ಲಾ ದಾಖಲೆ/ಮಾಹಿತಿಯೊಂದಿಗೆ ಮಾನ್ಯತೆ ಪಡೆಯಲು ಸೂಚಿಸುವುದು. ಒಂದುವೇಳೆ ಮಾಹಿತಿಗಳು ಸಮರ್ಪಕವಾಗಿ ಸಲ್ಲಿಸದೆ ತಿರಸ್ಕರಿಸಿದ ಅರ್ಜಗಳ ಶಾಲೆಗಳನ್ನು ನಿಯಮಾನುಸಾರ ಕ್ರಮವಹಿಸಲು ಸೂಚಿಸಿದೆ. ಉಲ್ಲೇಖ [1] ಮತ್ತು [2]ರಲ್ಲಿ ನೀಡಿರುವ ಮಾರ್ಗದರ್ಶನದಂತೆ ಕ್ರಮವಹಿಸತಕ್ಕದ್ದು.

***2022-23ನೇ ಸಾಲಿಗೆ ಮಾನ್ಯತೆ / ಮಾನ್ಯತೆ ನವೀಕರಣ ಸಂಬಂಧ ನಿಗದಿಪಡಿಸಿದ ವೇಳಾಪಟ್ಟಿ.***

| ಕ್ರ.ಸಂ | ವಿವರ | ಅಧಿಕಾರಿಗಳು | ದಿನಾಂಕ |
|---|---|---|---|
| 01 | **ಶಾಲಾ ಆಡಳಿತ ಮಂಡಳಿಗಳು ಆನ್ ಲೈನ್ ಮೂಲಕ ಮಾನ್ಯತೆ / ಮಾನ್ಯತೆ ನವೀಕರಣಕ್ಕೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ** | **ಸಂಬಂಧಿಸಿದ ಆಡಳಿತ ಮಂಡಳಿಗಳ ಆಡಳಿತಾಧಿಕಾರಿಗಳು** | **18-01-2023 ರಿಂದ 25-01-2023** |

| | | | |
|---|---|---|---|
| 02 | ***ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ***<br><br>ಆಡಳಿತ ಮಂಡಳಿಗಳು ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ, ಶಾಲಾ ಭೇಟಿ ವರದಿಯೊಂದಿಗೆ ಉಪನಿರ್ದೇಶಕರಿಗೆ ಸಲ್ಲಿಸಲು ಕೊನೆಯ ದಿನಾಂಕ | ವಿಷಯ ನಿರ್ವಾಹಕರು<br>ವ್ಯವಸ್ಥಾಪಕರು / ಅಧೀಕ್ಷಕರು<br>ಕ್ಷೇತ್ರಶಿಕ್ಷಣಾಧಿಕಾರಿಗಳು | 18-01-2023 ರಿಂದ 27-01-2023 |
| 03 | ***ಉಪನಿರ್ದೇಶಕರ ಕಛೇರಿಯಲ್ಲಿ ಪರಿಶೀಲಿಸಲು*** | ವಿಷಯ ನಿರ್ವಾಹಕರು<br>ಪತ್ರಾಂಕಿತ ವ್ಯವಸ್ಥಾಪಕರು / ಅಧೀಕ್ಷಕರು | 18-01-2023 ರಿಂದ 31-01-2023 |
| | | ಆಡಳಿತ ಮಂಡಳಿಗೆ ರೋಲ್ ಬ್ಯಾಕ್ ಮಾಡಲು ಕಾಲಾವಧಿ [ROLL BACK] | 20-01-2023 ರಿಂದ 03-02-2023 |
| 04 | ಆಡಳಿತ ಮಂಡಳಿಗಳು ಆಕ್ಷೇಪಣೆಯನ್ನು ಸರಿಪಡಿಸಿ, ಉಪನಿರ್ದೇಶಕರಿಗೆ ಹಿಂತಿರುಗಿಸಲು ಕೊನೆಯ ದಿನಾಂಕ | ಆಡಳಿತ ಮಂಡಳಿಗಳು ಆಕ್ಷೇಪಣೆ ಯನ್ನು ಸರಿಪಡಿಸಿ DDPI ರವರಿಗೆ ಹಿಂತಿರುಗಿಸಲು | 20-01-2023 ರಿಂದ 06-02-2023 |
| 05 | ಸ್ವೀಕರಿಸಿದ ಅರ್ಜಿಗಳನ್ನು ಇತ್ಯರ್ಥಪಡಿಸಿ ಅರ್ಹರಿಗೆ ಮಾನ್ಯತೆ / ಮಾನ್ಯತೆ ನವೀಕರಿಸಿ, ನವೀಕರಣ ಪ್ರಮಾಣ ಪತ್ರವನ್ನು / ತಿರಸ್ಕರಿಸಿದ್ದಲ್ಲಿ ಹಿಂಬರಹವನ್ನು ಅಪ್ ಲೋಡ್ ಮಾಡಲು ಕೊನೆಯ ದಿನಾಂಕ | ಉಪನಿರ್ದೇಶಕರು[ಆಡಳಿತ] | 20-01-2023 ರಿಂದ 09-02-2023 |

***ವಿಶೇಷ ಸೂಚನೆ:*** ಯಾವುದೇ ಕಛೇರಿಯಲ್ಲಿ ಪ್ರತಿ ಅರ್ಜಿ ಸ್ವೀಕರಿಸಿದ 02 ದಿನಗಳಿಗಿಂತ ಹೆಚ್ಚುವರಿ ದಿನಗಳು ಲಾಗಿನ್ ನಲ್ಲಿ ಬಾಕಿ ಉಳಿಸಿಕೊಳ್ಳುವಂತಿಲ್ಲ. [ಉಪನಿರ್ದೇಶಕರು ಅರ್ಜಿಗಳಲ್ಲಿ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಅಂತಹ ಅರ್ಜಿಗಳನ್ನು ROLL BACK ಮಾಡಲು ಲಾಗಿನ್‌ಗೆ ಬಂದ ದಿನದಿಂದ 02 ದಿನಗಳೊಳಗೆ ಆಡಳಿತ ಮಂಡಳಿಗೆ ಕಳುಹಿಸತಕ್ಕದ್ದು] ತಂತ್ರಾಂಶದಲ್ಲಿ ನಿಗಧಿಪಡಿಸಿರುವ ಕಾಲಮಿತಿಯಂತೆ ತಂತಾನೆ ಮುಂದಿನ ಲಾಗಿನ್‌ಗೆ ಹೋಗುತ್ತದೆ. ಆಯಾ ಲಾಗಿನ್ ನ ಸಿಬ್ಬಂದಿ / ಅಧಿಕಾರಿಗಳು ಇದರ ಜವಾಬ್ದಾರಿಯನ್ನು ಅರಿತು ಕಾಲಮಿತಿಯಲ್ಲಿ ಪೂರ್ಣಗೊಳಿಸುವಂತೆ ಎಚ್ಚರಿಕೆ ನೀಡಿದೆ. ಉಲ್ಲೇಖ [1]ರಲ್ಲಿ ನೀಡಿರುವ ಮಾರ್ಗದರ್ಶನಗಳನ್ನು ಕಡ್ಡಾಯವಾಗಿ ಪಾಲಿಸಿ ಮಾನ್ಯತೆಯನ್ನು ನವೀಕರಿಸಲು ಸೂಚಿಸಿದೆ. ಒಂದು ವೇಳೆ ಮಾನ್ಯತೆ ನವೀಕರಿಸುವ ಬಗ್ಗೆ ಕಾನೂನು ಉಲ್ಲಂಘನೆಯಾದಲ್ಲಿ ಅಥವಾ ಅನಗತ್ಯ ವಿಳಂಬ ಅಥವಾ ಇತರೆ ಆಧಾರದ ಮೇಲೆ ದೂರುಗಳು ಬಂದಲ್ಲಿ ತಮ್ಮ ಮೇಲೆ ಸೂಕ್ತ ಶಿಸ್ತು ಕ್ರಮ ಜರುಗಿಸುವುದು ಅನಿವಾರ್ಯವಾಗುತ್ತದೆ.

17/01/2023

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

***ಇವರಿಗೆ:***

*01.* ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.

*02.* ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ. [ಇವರು ಎಲ್ಲಾ ಖಾಸಗಿ ಅನುದಾನರಹಿತ ಆಡಳಿತ ಮಂಡಳಿ ಹಾಗೂ ಅನುದಾನರಹಿತ ಶಾಲಾ ಮುಖ್ಯಸ್ಥರುಗಳಿಗೆ ಸುತ್ತೋಲೆಯನ್ನು ತಲುಪಿಸುವುದು]

*03.* ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.

***ಪ್ರತಿಯನ್ನು, ಮಾಹಿತಿಗಾಗಿ.***

*01.* ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು.

*02.* ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರ್ಗಿ ವಿಭಾಗ.

*03.* ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.

***04.*** ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಕ್ಕಾಗಿ.

***05.*** ಹಿರಿಯ ಸಹಾಯಕ ನಿರ್ದೇಶಕರು, ಎಸ್.ಎ.ಟಿ.ಎಸ್., ವಿಭಾಗ, ಇವರು ತಂತ್ರಾಂಶವನ್ನು ಬಿಡುಗಡೆ ಮಾಡುವುದು ಹಾಗೂ ತಂತ್ರಾಂಶವು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ನಿಗಾವಹಿಸುವುದು.

***06.*** ಕಛೇರಿ ಪ್ರತಿ.

C:\Users\Work\Desktop\RK\ಮಾನ್ಯತೆ ನವೀಕರಣ ಅವಧಿ ವಿಸ್ತರಣೆ [17-1-2023].docx